# ಪ್ರಾರ್ಥನೆ

## ಶ್ರೀಕೃಷ್ಣಸ್ತವ

**ಅತ್ಯಂತ ಬಾಲಮತಸೀ ಕುಸುಮ ಪ್ರಕಾಶಂ**
**ದಿಗ್ವಾಸಸಂ ಕನಕಭೂಷಣ ಭೂಷಿತಾಂಗಮ್ ।**
**ವಿಸ್ರಸ್ತ ಕೇಶಮರುಣಾಧರಮಾಯತಾಕ್ಷಂ**
**ಕೃಷ್ಣಂ ನಮಾಮಿ ಶಿರಸಾ ವಸುದೇವಸೂನುಮ್ ॥ ೧॥**

ಅಗಸೆಯ ಹೂವಿನಂತೆ ಹೊಳೆಯುವ, ಚಿನ್ನದ ತೊಡವಿನಿಂದ ಭೂಷಿತವಾದ ಒಡಲ, ಬಿಚ್ಚಿದ ಕೂದಲ, ಕೆಂದುಟಿಯ, ಹರಹ ಕಣ್ಣಿನ, ವಸುದೇವಸೂನು ಎಳೆಹಸುಳೆ ಕೃಷ್ಣನ ದಿಗಂಬರ ಮೂರ್ತಿಗೆ ತಲೆಬಾಗಿ ನಮಸ್ಕಾರ ಮಾಡುತ್ತೇನೆ.

**ಹಸ್ತಾಂಘ್ರಿ ನಿಕ್ವಣಿತ ಕಂಕಣ ಕಿಂಕಿಣೀಕಂ**
**ಮಧ್ಯೇ ನಿತಂಬಮವಲಂಬಿತ ಹೇಮಸೂತ್ರಮ್ ।**
**ಮುಕ್ತಾ ಕಲಾಪ ಮುಕುಲೀಕೃತ ಕಾಕಪಾಕ್ಷಂ**
**ವಂದಾಮಹೇ ವ್ರಜಹರಂ ವಸುದೇವಭಾಗ್ಯಮ್ ॥ ೨ ॥**

ಕೈಯಲ್ಲಿ ಕಾಲಲ್ಲಿ ಘಲಿರೆನ್ನುವ ಕಂಕಣ ಕಿಂಕಿಣಿ, ಮಧ್ಯೆ ನಿತಂಬವನ್ನವಲಂಬಿಸಿದ ಹೇಮಸೂತ್ರ , ಮುತ್ತಿನ ಹಾರದಿಂದ ಕಟ್ಟಿರುವ ಕಾಕಪಕ್ಷ ಇವುಗಳನ್ನುಳ್ಳ ವಸುದೇವಭಾಗ್ಯರೂಪಿ ವ್ರಜವಿಹಾರಿಯನ್ನು ವಂದಿಸುತ್ತೇನೆ.

**ಬೃಂದಾವನ ದ್ರುಮತಲೇಷು ಗವಾಂ ಗಣೇಷು**
**ವೇದಾವಸಾನಸಮಯೇಷು ಚ ದೃಶ್ಯತೇ ಯತ್ ।**
**ತದ್ವೇಣುವಾದನಪರಂ ಶಿಖಿಪಿಂಛಚೂಡಂ**
**ಬ್ರಹ್ಮ ಸ್ಮರಾಮಿ ಕಮಲೇಕ್ಷಣಮಭ್ರನೀಲಮ್ ॥ ೩ ॥**



ಬೃಂದಾವನದ ಮರಗಳ ಅಡಿಗಳಲ್ಲಿ, ದನಗಳ ಮಂದೆಗಳಲ್ಲಿ, ವೇದಾಂತ ಸಿದ್ಧಾಂತಗಳಲ್ಲಿ, ಕಾಣುವುದಾದ, ಆ ವೇಣುವಾದನದಲ್ಲಿ ಆಸಕ್ತವಾದ ಮತ್ತು ನವಿಲುಗರಿಯ ತಲೆದೊಡವನ್ನುಳ್ಳ, ಕಮಲನಯನದ ಅಭ್ರನೀಲವಾದ ಬ್ರಹ್ಮವನ್ನು ಸ್ಮರಿಸುತ್ತೇನೆ.

*(ಶ್ರೀಕೃಷ್ಣಕರ್ಣಾಮೃತದಿಂದ)*

# ಸೂಕ್ತಿಪ್ರಭ

**ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್।**
**ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥**

ಕುಲದ ಹಿತಕ್ಕಾಗಿ ಒಬ್ಬನನ್ನು ತ್ಯಾಗಮಾಡಬೇಕು; ಗ್ರಾಮದ ಹಿತಕ್ಕಾಗಿ ಕುಲವನ್ನು ತ್ಯಾಗ ಮಾಡಬೇಕು. ದೇಶದ ಹಿತಕ್ಕಾಗಿ ಗ್ರಾಮವನ್ನು ತ್ಯಜಿಸಬೇಕು. ಆತ್ಮನ ಹಿತಕ್ಕಾಗಿ ಪೃಥ್ವಿಯನ್ನೂ ತ್ಯಾಗ ಮಾಡಬೇಕು.

— ಹಿತೋಪದೇಶ

ಒಬ್ಬನು ತಾನು ಆಲೋಚಿಸಿದಂತೆ ಆಗುತ್ತಾನೆ. ಭ್ರಮರವನ್ನು ಯಾವಾಗಲೂ ಆಲೋಚಿಸುತ್ತಿರುವ ಕೀಟ ಕೊನೆಗೆ ತಾನು ಭ್ರಮರವಾಗುತ್ತದೆ ಎನ್ನುತ್ತಾರೆ. ಇದರಂತೆಯೇ ಯಾರು ಸಚ್ಚಿದಾನಂದವನ್ನು ಯಾವಾಗಲೂ ಧ್ಯಾನಿಸುತ್ತಾರೆಯೋ ಅವರು ಸಚ್ಚಿದಾನಂದಮಯರಾಗುವರು.

— ಶ್ರೀರಾಮಕೃಷ್ಣ ಪರಮಹಂಸ

ಇತರರ ಆನಂದವನ್ನು ಹೆಚ್ಚಿಸಲು ತನ್ನ ಶಕ್ತಿಯೆಲ್ಲವನ್ನೂ ಬಳಸಿ ಯತ್ನಿಸುವುದು ಪ್ರತಿಯೊಬ್ಬ ಮಾನವನ ಕರ್ತವ್ಯ.

— ವಿಲಿಯಂ ವಿಲ್ಬರ್‌ಫೋರ್ಸ್

ಜೀವನವಿಡೀ ನೀನು ಕೊಲ್ಲುತ್ತಲೇ ಹೋದರೂ, ಅದರಿಂದ ನಿನ್ನೆಲ್ಲ ಶತ್ರುಗಳು ನಾಶವಾಗಲಾರರು. ಅದಕ್ಕೆ ಬದಲಾಗಿ ನಿನ್ನಲ್ಲೇ ಇರುವ ಕ್ರೋಧವನ್ನು ನಾಶಮಾಡು — ಅದರಿಂದ ನಿನ್ನ ನಿಜವಾದ ಶತ್ರು ಸಾಯುವನು.

— ನಾಗಾರ್ಜುನ

ಅತ್ಯಂತ ಗಾಢವಾಗಿ ಕತ್ತಲೆ ಆವರಿಸಿದ ಸಮಯದಲ್ಲೇ ನಾವು ಬೆಳಕನ್ನು ಕಾಣಲು ನಮ್ಮೆಲ್ಲ ಗಮನವನ್ನೂ ಒಗ್ಗೂಡಿಸಬೇಕು.

— ಅರಿಸ್ಟಾಟಲ್